ಸೂರ್ಯನನ್ನು ಸ್ಪರ್ಶಿಸಬಹುದೆ? ಈ ಹುಚ್ಚುಸಾಹಸವನ್ನು ಸ್ವಲ್ಪ ಮಟ್ಟಿಗೆ ನಿಜವಾಗಿಸುವ ನಿಟ್ಟಿನಲ್ಲಿ ಮೊದಲ ಹೆಜ್ಜೆ ಇಟ್ಟಾಗಿದೆ. 'ಪಾರ್ಕರ್ ಸೌರ ಶೋಧಕ' ಎನ್ನುವ ಪುಟ್ಟ ರೋಬಾಟ್ ನೌಕೆ, ಸೂರ್ಯನ ಹೊರ ವಾತಾವರಣ 'ಕರೋನಾ'ದ ಒಳಗೆ ಧುಮುಕಿದೆ; ಸೂರ್ಯನ ಮೇಲ್ಮೈಯಿಂದ 61 ಲಕ್ಷ ಕಿ.ಮೀ. ದೂರದಲ್ಲಿ ಊಹಾತೀತ ವೇಗದಿಂದ ಹಾದುಹೋಗುವ ಸಾಹಸ ಮೆರೆದಿದೆ. ಮನುಕುಲದ ಯಶಸ್ವಿ 'ಸೂರ್ಯ ಸ್ಪರ್ಶ' ಎಂದು ಭಾವಿಸಬಹುದಾದ ಈ ಸಾಹಸ ಸೂರ್ಯನ ಅಧ್ಯಯನಕ್ಕೆ ಹೊಸ ಸಾಧ್ಯತೆಗಳನ್ನು ತೆರೆದಿಟ್ಟಿದೆ. ಪಾರ್ಕರ್ ನೌಕೆಯ ಸಾಹಸದ ಕುರಿತ ಈ ವಿಶಿಷ್ಟ ಬರಹ, ಸೂರ್ಯನನ್ನು ಕುರಿತ ಹಲವು ಸಂಗತಿಗಳನ್ನು 'ಸುಧಾ' ಓದುಗರಿಗೆ ಸರಳವಾಗಿ ಹೇಳುವ ಪ್ರಯತ್ನ.

■ **ಡಾ. ಬಿ.ಆರ್. ಗುರುಪ್ರಸಾದ್**
ನಿರ್ದೇಶಕರು, ಜವಹರಲಾಲ್ ನೆಹರೂ ತಾರಾಲಯ, ನಿವೃತ್ತ ಇಸ್ರೋ ವಿಜ್ಞಾನಿ



ಸೂರ್ಯನತ್ತ ಧಾವಿಸುತ್ತಿರುವ ಪಾರ್ಕರ್ ಸೌರ ಶೋಧಕ ನೌಕೆ
ಚಿತ್ರಗಳು: ನಾಸಾ